ದಿನಾಂಕ 03-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ. ಬಿ.ಎನ್.ಪಿ. ವಕೀಲರಿಂದಃ**

ದಾವಾ ಆಸ್ತಿಗಳ ಒಟ್ಟು ವಿಸ್ತೀರ್ಣ 9 ಎಕರೆ 93 ಸೆಂಟ್ಸ್. ದಾವಾ ಆಸ್ತಿಗಳಲ್ಲಿ ಯಾವ ಯಾವ ಸರ್ವೆ ನಂಬರ್ ಗಳಲ್ಲಿನ ಸ್ವತ್ತಿನಲ್ಲಿ ಏನೆಲ್ಲಾ ಕೃಷಿಗಳು ಇದೆ ಎಂದು ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ತೆಂಗು, ಅಡಿಕೆ , ವಿವಿಧ ಜಾತಿಯ ಮರಗಳು ಇರುತ್ತದೆ. ದಾವಾ ಸ್ವತ್ತುಗಳಲ್ಲಿ ಅಂದಾಜು 3000 ಅಡಿಕೆ ಮರಗಳು ಇರುತ್ತದೆ. ದಾವಾ ಸ್ವತ್ತಿನಲ್ಲಿ ನನ್ನ ತಂದೆ ಮತ್ತು ತಾಯಿ ಹಾಕಿರುವ ಮರಗಳು ಇರುತ್ತದೆ. ಸಾಕ್ಷಿ ಮುಂದುವರಿದು ನಾನು ಕೂಡಾ ಮರಗಳನ್ನು ಬೆಳೆಸಿದ್ದೇನೆ ಎಂದು ನುಡಿಯುತ್ತಾರೆ. ನಾನು ನಿರ್ದಿಷವಾಗಿ ಎಷ್ಟು ಮರಗಳನ್ನು ಬೆಳೆಸಿದ್ದೇನೆ ಎಂದು ಗೊತ್ತಿಲ್ಲ ಆದರೆ ತಾಯಿಯ ಜೊತೆ ಸೇರಿ ಮರಗಳನ್ನು ಬೆಳೆಸಿದ್ದೇನೆ. ನನ್ನ ತಾಯಿ ಮೃತರಾಗುವ ವರೆಗೂ ಕೂಡಾ ನಾನು ದಾವಾ ಸ್ವತ್ತುಗಳಲ್ಲಿಗೆ ಹೋಗಿ ಮರಗಳನ್ನು ಬೆಳೆಸಿದ್ದೇನೆ.

2006 ರಲ್ಲಿ ನನ್ನ ತಾಯಿ, ತಮ್ಮ, ತಂಗಿ ಹಾಗೂ ನನ್ನ ಮಧ್ಯೆ ಪಾಲು ಪತ್ರ ಆಗಿರುತ್ತದೆ. ತಲಾ 20 ಸೆಂಟ್ ಜಾಗ ಆ ಪಾಲು ಪತ್ರದಂತೆ ನಮಗೆ ಬಂದಿರುತ್ತದೆ. ಉಳಿದ 9 ಎಕರೆ 93 ಸೆಂಟ್ಸ್ ಪಾಲು ಪತ್ರದಂತೆ ನನ್ನ ತಾಯಿಯ ಹೆಸರಿಗೆ ಹೋಗಿರುತ್ತದೆ . ಅದೇ ದಾವಾ ಸ್ವತ್ತು. ನನ್ನ ತಾಯಿ ಹೊರತುಪಡಿಸಿ ವಾದಿಯರಾದ ನಮಗೆ ಕೊಟ್ಟ ತಲಾ 20 ಸೆಂಟ್ಸ್ ಜಾಗ ದಾವಾ ಸ್ವತ್ತಿನಿಂದ ಎಷ್ಟು ದೂರ ಇದೆ ಎಂದು ನಾನು ವಿಚಾರಿಸಿಲ್ಲ. ನಮಗೆ ಕೊಟ್ಟ ಸ್ವತ್ತು ದಾವಾ ಸ್ವತ್ತಿಗೆ ಲಗತ್ತಾಗಿ ಇರುತ್ತಾದಾ ಅಥವಾ ಅದು ದಾವಾ ಸ್ವತ್ತಿನಿಂದ ಎಷ್ಟು ದೂರ ಇದೆ ಎಂದು ನಾನು ನನ್ನ ತಾಯಿಯಹತ್ತಿರ ಕೇಳಿಲ್ಲ. ನಮಗೆ ಪಾಲುಪಟ್ಟಿಯಲ್ಲಿ ಬಂದ ಸ್ವತ್ತನ್ನು ಕೂಡಾ ನಮ್ಮ ತಾಯಿಯೇ ನೋಡಿಕೊಳ್ಳಲಿ ಎಂದು ಅವರೇ ಕೇಳಿದ ಕಾರಣ ಪವರ್ ಆಫ್ ಅಟಾರ್ನಿ ಮಾಡಿ ಕೊಟ್ಟಿರುತ್ತೇವೆ. ನನ್ನ ತಾಯಿ ಮೃತರಾಗುವ ವರೆಗೆ ಅವರೇ ನಮಗೆ ಬಂದ ಸ್ವತ್ತುಗಳನ್ನು ಪವರ್ ಆಫ್ ಅಟಾರ್ನಿ ಮೂಲಕ ಉಸ್ತುವಾರಿ ಮಾಡುತ್ತಿದ್ದರು. ಪವರ್ ಆಫ್ ಅಟಾರ್ನಿ ಮೂಲಕ ನಮಗೆ ಬಂದ ಸ್ವತ್ತುಗಳನ್ನು ಲೋನ್ ಪಡೆದುಕೊಳ್ಳಲು , ಪರಬಾರೆ ಮಾಡಲು , ಅದರಲ್ಲಿ ಬರುವ ಉತ್ಪತ್ತಿಯನ್ನು ಅನುಭವಿಸಲು ಅಧಿಕಾರ ಕೊಟ್ಟಿದ್ದೇವು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ತಾಯಿಗೆ 2003 ರಲ್ಲಿ ಸ್ಟ್ರೋಕ್ ಆಗಿದ್ದು ಅಲ್ಲಿಂದ ಅವರ ಆರೋಗ್ಯದಲ್ಲಿ ಏರುಪೇರು ಕಂಡು ಬಂದಿರುತ್ತದೆ. ಆನಂತರದಲ್ಲಿ ಅವರ ಆರೋಗ್ಯ ಪರಿಸ್ಥಿತಿ ಮೊದಲಿನಂತೆ ಸರಿಯಾಗಿರಲಿಲ್ಲ. ಪವರ್ ಆಫ್ ಆಟಾರ್ನಿಯನ್ನು ಪುತ್ತೂರಿನ ಶೇಖರ ನಾರಾವಿ ಎಂಬ ದಾಸ್ತವೇಜು ಬರಹಗಾರರು ತಯಾರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ

ಮಾಡಿಕೊಟ್ಟ ಪವರ್ ಆಫ್ ಆಟಾರ್ನಿಗೆ ಪುತ್ತೂರಿನಲ್ಲಿ ಸಹಿ ಮಾಡಿಲ್ಲ , ನಮ್ಮ ಮನೆ ಬೆದ್ರಾಡಿಯಲ್ಲಿ ಸಹಿ ಮಾಡಿದ್ದೇನೆ. ಪವರ್ ಆಫ್ ಆಟಾರ್ನಿಗೆ ನನ್ನ ತಾಯಿಯ ಸಂಗಡ ನಾನು ಪುತ್ತೂರಿಗೆ ಬಂದು ನೋಟರಿ ಶ್ರೀ. ಶಿವಪ್ರಸಾದ್ ರವರ ಸಮ್ಮುಖ ಸಹಿ ಮಾಡಿದ್ದೇನೆ ಎಂದರೆ ನಾನು ಒಪ್ಪುವುದಿಲ್ಲ.

ನನ್ನ ತಾಯಿಗೆ ಸ್ಟ್ರೋಕ್ ಆದ ನಂತರ ಆರೋಗ್ಯ ಪರಿಸ್ಥಿತಿ ಸರಿ ಇಲ್ಲಾ ಎಂದು ಗೊತ್ತಾದ ಮೇಲೆ ಅವರು ನಮ್ಮ ಆಸ್ತಿಗಳನ್ನು ನೋಡಲು ಸಾಧ್ಯಾವಾಗುವುದಿಲ್ಲ ಎಂದು ನಾವು ಅವರಿಗೆ ಮಾಡಿಕೊಟ್ಟ ಪವರ್ ಆಫ್ ಆಟಾರ್ನಿಯನ್ನು ರದ್ದುಪಡಿಸಲು ನನ್ನ ತಾಯಿಗೆ ನೋಟೀಸು ಕೊಟ್ಟಿರಲಿಲ್ಲ. ನಾನು ಮತ್ತು ನನ್ನ ತಂಗಿ ನನ್ನ ತಾಯಿಯ ಸಂಗಡ 03-11-2006 ರಂದು ಪುತ್ತೂರಿಗೆ ಬಂದು ನನ್ನ ತಾಯಿಯ ಹೆಸರಿಗೆ ಪವರ್ ಆಫ್ ಆಟಾರ್ನಿಯನ್ನು ಬರೆದುಕೊಟ್ಟಿದ್ದಾರೆ ಎಂದರೆ ಒಪ್ಪುವುದಿಲ್ಲ. ನನ್ನ ತಾಯಿಗೆ ನಾವು ಮಾಡಿಕೊಟ್ಟ ಪವರ್ ಆಫ್ ಆಟಾರ್ನಿ ಯನ್ನು ದಾವಾ ಸ್ವತ್ತಿನ ದಾಖಲೆಗಳ ಸಹಿತ ನನ್ನ ತಾಯಿ ನನ್ನ ತಮ್ಮನಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ನೀಡಲಾಯಿತು.)

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.